# ಎನ್ಐಟಿಕೆಯಲ್ಲಿ ಸ್ಮಾರ್ಟ್ ಇ-ಮೊಬಿಲಿಟಿ ವಾಹನ ಹಸ್ತಾಂತರ

**ಮಂಗಳೂರು:** ಎನ್ಐಟಿಕೆಗಳಲ್ಲಿ ಪ್ರವೇಶ ಪಡೆಯುವ ಅಂಗವಿಕಲ ವಿದ್ಯಾರ್ಥಿಗಳಿಗೆ ಸಂಚಾರ ಮಾಡುವುದು ಸವಾಲು. ಅದಕ್ಕಾಗಿ ಪೆಟ್ರೋನೆಟ್ ಎಂಎಚ್‌ಬಿ ಲಿಮಿಟೆಡ್ ಇ-ಮೊಬಿಲಿಟಿ ಸೈಕಲ್ ಮತ್ತು ವೀಲ್‌ಚೇರ್‌ಗಳನ್ನು ಪ್ರಾಯೋಜಿಸಿದೆ. ಇವುಗಳನ್ನು ಎನ್ಐಟಿಕೆ ಸಂಸ್ಥೆಯೊಳಗೆ ಆ್ಯಪ್ ಆಧಾರಿತ ನಿಯಂತ್ರಣದೊಂದಿಗೆ ತಯಾರಿಸಲಾಗಿದೆ ಎಂದು ಪೆಟ್ರೋನೆಟ್ ಎಂಎಚ್‌ಬಿ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಸುಧೀರ್‌ಕುಮಾರ್ ಹೇಳಿದರು.

ಜಿಪಿಎಸ್ ಟ್ರ್ಯಾಕಿಂಗ್ ಮತ್ತು ಸ್ಮಾರ್ಟ್ ಲಾಕ್ ತಂತ್ರಜ್ಞಾನ ಹೊಂದಿರುವ ಇ-ಮೊಬಿಲಿಟಿ ವಾಹನಗಳನ್ನು ಎನ್ಐಟಿಕೆ ಸುರತ್ಕಲ್‌ನ ಅಂಗವಿಕಲ ವಿದ್ಯಾರ್ಥಿಗಳಿಗೆ ಹಸ್ತಾಂತರಿಸಿ ಮಾತನಾಡಿದರು.

ಎನ್ಐಟಿಕೆ ನಿರ್ದೇಶಕ ಪ್ರೊ.ರವಿ, ಪೆಟ್ರೋನೆಟ್ ಹಿರಿಯ ಅಧಿಕಾರಿಗಳಾದ ಸೈಸುಧಮ್ಮಿ, ಉದಯ ಪೈ, ಎನ್ಐಟಿಕೆ ಕಾರ್ಯ ನಿರ್ವಹಣಾಧಿಕಾರಿ ಪ್ರೊ.ಕುಮಾರ್ ಜಿ.ಎನ್., ಪ್ರೊ.ವೆಂಕಟೇಶ ಪೆರುಮಾಳ್, ಪ್ರೊ:ಪ್ರಸನ್ನ ಬೆಳೂರು ಉಪಸ್ಥಿತರಿದ್ದರು. 25 ಇ-ಸೈಕಲ್ ಮತ್ತು 7 ಮೋಟರೈಸ್ಡ್ ವೀಲ್‌ಚೇರ್‌ಗಳನ್ನು ಎನ್ಐಟಿಕೆ ಸುರತ್ಕಲ್‌ನ ಸಹ ಪ್ರಾಧ್ಯಾಪಕ ಡಾ.ಪೃಥ್ವಿರಾಜ ಸಂಸ್ಥೆಯೊಳಗೆ ವಿನ್ಯಾಸಗೊಳಿಸಿ ತಯಾರಿಸಿದ್ದಾರೆ.

Vijayavani, Date: 17/03/2026, p.02